# ಕರ್ನಾಟಕ ವಿಧಾನ ಪರಿಷತ್ತು
## 144ನೇ ಅಧಿವೇಶನ 2021

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 18(97)
ಮಾನ್ಯ ಸದಸ್ಯರ ಹೆಸರು: ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು: ಮಾನ್ಯ ಉನ್ನತ ಶಿಕ್ಷಣ ಸಚಿವರು
ಉತ್ತರಿಸಬೇಕಾದ ದಿನಾಂಕ: 13-09-2021

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಕ್ರಮ ಗೌರವ ಡಾಕ್ಟರೇಟ್ ಕುರಿತು ಸರ್ಕಾರಕ್ಕೆ ದೂರು ದಾಖಲಾಗಿ ಸರ್ಕಾರ ಉನ್ನತ ಶಿಕ್ಷಣ ಪರಿಷತ್‌ನಿಂದ ವರದಿ ಪಡೆದು, ಆರೋಪವು ಗುರುತರ ವಾಗಿದ್ದು, ಸರ್ಕಾರದ ಹಂತದ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಿ, ಮುಂದಿನ ಕ್ರಮವಹಿಸುವಂತೆ ಶಿಫಾರಸ್ಸು ಮಾಡಿದಾಗ್ಯೂ ಈ ಬಗ್ಗೆ ಅನಗತ್ಯ ವಿಳಂಬ ಮಾಡಿ, ತನಿಖೆ ನಡೆಸದಿರಲು ಕಾರಣವೇನು; ಹಾಗೂ ಮುಂದೆ ಕೈಗೊಳ್ಳಲಿರುವ ಕ್ರಮವೇನು; | ಅಲಿಯನ್ಸ್ ವಿಶ್ವವಿದ್ಯಾಲಯವು ರಾಜ್ಯ ಶಾಸನ ರಚನೆಯ ಮೂಲಕ ಖಾಸಗಿ ವಿಶ್ವವಿದ್ಯಾಲಯವಾಗಿ ಸ್ಥಾಪಿತಗೊಂಡಿರುತ್ತದೆ ಹಾಗೂ ಅಲಯನ್ಸ್ ಖಾಸಗಿ ವಿಶ್ವವಿದ್ಯಾಲಯದ ಅಧಿನಿಯಮ, 2010ರ ಪ್ರಕರಣ 32(viii) ರಲ್ಲಿ ಗೊತ್ತುಪಡಿಸಿರುವಂತೆ ಗೌರವ ಡಾಕ್ಟರೇಟ್ ಪದವಿ ನೀಡಲು ಅಲಯನ್ಸ್ ವಿಶ್ವವಿದ್ಯಾಲಯವು ಸಕ್ಷಮವಾಗಿರುತ್ತದೆ. ಪ್ರಸ್ತಾಪಿತ ದೂರಿಗೆ ಸಂಬಂಧಿಸಿದ ಗೌರವ ಡಾಕ್ಟರೇಟ್ ಪದವಿಯನ್ನು 2017ರಲ್ಲಿ ಅಧಿಕೃತವಾಗಿ ನೀಡಿರುವುದಾಗಿ ಅಲಯನ್ಸ್ ವಿಶ್ವವಿದ್ಯಾಲಯವು ತಿಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಮುಂದಿನ ಕ್ರಮ ಇರುವುದಿಲ್ಲ. |
| ಆ) | ವಿಧಾನ ಪರಿಷತ್ತಿನ ೧೪೩ನೇ ಅಧಿವೇಶನದಲ್ಲಿ ಚುಕ್ಕೆ ಗುರುತಿನ ಪ್ರ.ಸಂ.249(1741)ರ ಇ ಭಾಗದಲ್ಲಿ ಮೇಲಿನ ಪ್ರಶ್ನೆಯನ್ನು ಕೇಳಲಾಗಿ, ಅಲಯನ್ಸ್ ವಿಶ್ವವಿದ್ಯಾನಿಲಯವು ಶಾಸನಬದ್ಧ ವಿಶ್ವವಿದ್ಯಾನಿಲಯ ಅಧಿನಿಯಮ ೨೦೧೦ರ ಪ್ರಕರಣ ೩೨ (viii) ರಲ್ಲಿ ಸಮಕ್ಷಮ ಪ್ರಾಧಿಕಾರದ ಮುಖಾಂತರ ಗೌರವ ಡಾಕ್ಟರೇಟ್ ಕೊಡಲು ಅರ್ಹತೆ ಹೊಂದಿದೆ ಎಂದು ಉಲ್ಲೇಖಿಸಲಾಗಿದ್ದು, ಅಲಯನ್ಸ್ ವಿಶ್ವವಿದ್ಯಾನಿಲಯದ ಪ್ರಾಧಿಕಾರವು ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳಿಗೆ ರಾಜ್ಯಪಾಲರಿಂದ ಗೌರವ ಡಾಕ್ಟರೇಟ್ ಕೊಡಿಸಿದರೆ ಸರ್ಕಾರ ತನಿಖೆ ನಡೆಸುವ ಅವಕಾಶ ಇದೆಯೇ; ಅಥವಾ ಇಲ್ಲವೇ; (ಮಾಹಿತಿ ಒದಗಿಸುವುದು) | ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಾಗಲಿ ಅಥವಾ ಖಾಸಗಿ ವಿಶ್ವವಿದ್ಯಾಲಯಗಳಾಗಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡುವ ಪ್ರಕ್ರಿಯೆಯಲ್ಲಿ ಸರ್ಕಾರದ ಪಾತ್ರವಿರುವುದಿಲ್ಲ. ಈ ಕುರಿತು ವಿಶ್ವವಿದ್ಯಾಲಯಗಳಿಂದ ರಚಿಸಲ್ಪಟ್ಟ ಸಂಗತ ಪರಿನಿಯಮಗಳಿಗೆ ಒಳಪಟ್ಟು ವಿಶ್ವವಿದ್ಯಾಲಯಗಳಿಂದ ಈ ಪ್ರಕ್ರಿಯೆಯನ್ನು ಜರುಗಿಸಲಾಗುತ್ತದೆ. ಕಳಂಕಿತ ಹಿನ್ನೆಲೆ ಹೊಂದಿರುವ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡುವ ಮುನ್ನ ಈ ವಿಷಯವನ್ನು ಖಚಿತಪಡಿಸಿಕೊಳ್ಳುವುದು ಅಲಯನ್ಸ್ ವಿಶ್ವವಿದ್ಯಾಲಯದ ಕರ್ತವ್ಯವಾಗಿದ್ದು ಸರ್ಕಾರದ ಹಂತದಲ್ಲಿ ಯಾವುದೇ ಕ್ರಮವಿರುವುದಿಲ್ಲ. |
| ಇ) | ಸರ್ಕಾರ ಅಕ್ರಮ ಡಾಕ್ಟರೇಟ್ ಕುರಿತಾದ ಪ್ರಶ್ನೆಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಸಮ್ಮುಖದಲ್ಲಿ ಸಭೆ ನಡೆಸಿ ಈ ಆರೋಪವು ಮೇಲ್ನೋಟಕ್ಕೆ ಆಳವಾದ ತನಿಖೆ ನಡೆಸುವ ಅಗತ್ಯದ ಮೇರೆಗೆ ಕ್ರಮವಹಿಸಲಾಗುತ್ತದೆ ಎಂದು ಈ ಹಿಂದಿನ ಅಧಿವೇಶನದಲ್ಲಿ ಉತ್ತರ ಒದಗಿಸಿ, ನಂತರ ತನಿಖೆ ನಡೆಸುವ ಅಗತ್ಯವಿಲ್ಲದೆಂದು ಹೇಳಲು ಕಾರಣವೇನು; ಸರ್ಕಾರ 18.09.2020 ರಂದು ಅಕ್ರಮ ಡಾಕ್ಟರೇಟ್ ರದ್ದುಪಡಿಸಿ ವರದಿ ನೀಡಲು ವಿಶ್ವವಿದ್ಯಾನಿಲಯಕ್ಕೆ ಬರೆಯಲಾದ ಪತ್ರಕ್ಕೆ ಸಮಜಾಯಿಷಿಯೇನು; ಸೂಕ್ತ ಉತ್ತರ ಬರದಿದ್ದರೆ ಸರ್ಕಾರದ ಮುಂದಿನ ಕ್ರಮವೇನು; | ಪ್ರಸ್ತಾಪಿತ ದೂರಿಗೆ ಸಂಬಂಧಿಸಿದ ಗೌರವ ಡಾಕ್ಟರೇಟ್ ಪದವಿಯನ್ನು 2017ರಲ್ಲಿ ಅಧಿಕೃತವಾಗಿ ನೀಡಿರುವುದಾಗಿ ಅಲಯನ್ಸ್ ವಿಶ್ವವಿದ್ಯಾಲಯವು ತಿಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಮುಂದಿನ ಕ್ರಮ ಇರುವುದಿಲ್ಲ. |

| | | |
|---|---|---|
| ಈ) | ಸರ್ಕಾರ ಅಕ್ರಮ ಡಾಕ್ಟರೇಟ್ ಬಗ್ಗೆ ಅಧಿವೇಶನದಲ್ಲಿ ನೀಡಿರುವ ಭರವಸೆ ಹಾಗೂ ರಾಜ್ಯಪಾಲರ ಸುತ್ತೋಲೆ ನಿಯಮ, ಅಲೆಯನ್ಸ್ ವಿಶ್ವವಿದ್ಯಾಲಯಕ್ಕೆ ಅನ್ವಯಿಸುವುದಿಲ್ಲವೇ; ಅಲಯನ್ಸ್ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಲು ಮಾಡಿಕೊಂಡಿರುವ ಮಾನದಂಡನೆಗಳ ವಿವರ ಒದಗಿಸುವುದು; ಈ ಹಿಂದಿನ ಅಧಿವೇಶನದಲ್ಲಿ ಕೇಳಲಾದ ಪ್ರಶ್ನೆ ಸಂಖ್ಯೆ (ಈ) ಭಾಗದ ಪ್ರಶ್ನೆಗೆ ಉತ್ತರಿಸದಿರಲು ಕಾರಣವೇನು; ಮುಂದಿನ ಕ್ರಮವೇನು? | ಕೇಂದ್ರ ಹಾಗೂ ರಾಜ್ಯ ಶಾಸನದ ಮೂಲಕ ಸ್ಥಾಪಿತವಾಗುವ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಅಧಿನಿಯಮ, 1956ರ ಪ್ರಕರಣ 2(f)ರ ವ್ಯಾಪ್ತಿಗೊಳಪಡುತ್ತವೆ. ಮತ್ತು ಅದೇ ಅಧಿನಿಯಮದ ಪ್ರಕರಣ (3)ರಡಿ ಪರಿಭಾವಿತ ವಿಶ್ವವಿದ್ಯಾಲಯಗಳನ್ನು ಕೇಂದ್ರ ಸರ್ಕಾರದಿಂದ ಅಧಿಸೂಚಿಸಲಾಗುತ್ತಿದೆ.<br>ವಿಶ್ವವಿದ್ಯಾಲಯಗಳು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಅಧಿನಿಯಮ, 1956ರ ಪ್ರಕರಣ 2(f) ಹಾಗೂ ಪ್ರಕರಣ (3)ರ ವ್ಯಾಪ್ತಿಗೆ ಬಾರದ ಕೆಲವು ಸಂಸ್ಥೆಗಳು ಅಧಿಕೃತ ವಿಶ್ವವಿದ್ಯಾಲಯಗಳ ಪದನಾಮವನ್ನು ತಮ್ಮ ಸಂಸ್ಥೆಯ ಹೆಸರಿನೊಂದಿಗೆ ಬಳಸಿಕೊಂಡು ನಕಲಿ/ಅನಧಿಕೃತ ಪದವಿ/ಗೌರವ ಡಾಕ್ಟರೇಟ್ ಪದವಿಗಳನ್ನು ನೀಡುವುದು ಕಂಡುಬಂದಲ್ಲಿ ಅಂತಹ ಸಂಸ್ಥೆಗಳ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗಿದ್ದು, ಇದು ಅಧಿಕೃತ ಖಾಸಗಿ ಅಲಿಯನ್ಸ್ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವುದಿಲ್ಲ.<br>ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರಡಿ ನಿಯಂತ್ರಿಸಲ್ಪಡುವ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಿಗೆ ಮಾತ್ರ ಮಾನ್ಯ ರಾಜ್ಯಪಾಲರ ಸುತ್ತೋಲೆಯು ಅನ್ವಯಿಕೆ ಹೊಂದಿದ್ದು, ಪ್ರಸ್ತಾಪಿತ ಸುತ್ತೋಲೆಯು ಅಲಿಯನ್ಸ್ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವುದಿಲ್ಲ.<br>ಅಲಿಯನ್ಸ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ನೀಡುವ ಪ್ರಕ್ರಿಯೆಯ ಸಂಬಂಧದದಲ್ಲಿ ಅನುಸರಿಸುವ ಕ್ರಮವಿಧಾನದ ಬಗೆಗಿನ ಮಾಹಿತಿಯನ್ನು **ಅನುಬಂಧ-01ರಲ್ಲಿ** ಒದಗಿಸಲಾಗಿದೆ.<br>ಈ ಹಿಂದಿನ ಅಧಿವೇಶನದಲ್ಲಿ ಕೇಳಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1741ರ ಉಪ ಪ್ರಶ್ನೆ ಅ, ಆ ಮತ್ತು ಇ ಗಳಿಗೆ ಒದಗಿಸಲಾದ ಉತ್ತರ ಹಾಗೂ ವಿವರಗಳ ಹಿನ್ನಲೆಯಲ್ಲಿ ಅಗತ್ಯವಾದ ಮೇರೆಗೆ ಉಪ ಪ್ರಶ್ನೆ (ಈ) ರಲ್ಲಿ ಪ್ರಸ್ತಾಪಿಸಲಾದ ಕ್ರಮದ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಉತ್ತರಿಸಲಾಗಿದೆ. |

ಸಂಖ್ಯೆ: ಇಡಿ/193/ಯುಆರ್‌ಸಿ/2021

**(ಡಾ|| ಅಶ್ವತ್ಥನಾರಾಯಣ ಸಿ.ಎನ್)**
ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ,ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ALLIANCE UNIVERSITY

Private University established in Karnataka State by Act No 34 of year 2010
Recognized by the University Grants Commission (UGC), New Delhi

# PROCEDURES FOR CONFERMENT OF HONORARY DOCTORATE DEGREE

**Introduction:**

The University may confer honorary degrees as per the chapter V section 32 (viii) of the Alliance University Act 2010. The honorary degree shall be conferred only at convocation and may be taken in person or in absentia.

**Honorary Doctorate Award:**

The University considers it important to honor citizens for excellent performers in any area such as Education, Industry, Social Work, Philanthropy, Governance, Literature, Performing arts and so on.

The Committee is appointed twelve weeks in advance to list and select the awardees. The committee will be Chaired by a senior Faculty Member, and the Registrar E&E will be the Secretary of the committee.

The committee will act on the following.

1. Draw up a list and deliberate the list for selecting the number of awardees.
2. Draw the final list and begin the process of contacting the proposed awardees in an order so decided by the committee as preferred list. The contacted persons should give a letter of acceptance based on which the Chairperson of the committee will start the procedure of finalizing the awardees list so that the same could be listed in the Convocation Invitation.
3. The awardee will be contacted by the Chairperson of the committee and conduct detailed interviews to list out the achievements inclusive of the Educational Degrees of the proposed awardee.
4. The Chairperson will then form small group to prepare the citation which will be approved by the Pro Vice Chancellor (ACADEMIC) and then go for a calligraphy plate preparation.
5. The citation and the Degree both need to be framed in a proper manner so the Chancellor may hand over the two testimonials to the awardee in the Convocation ceremony after the citation is read and Degree awarded.
6. The Honorary Doctorate awardee will have to write two letters to the Registrar of the University as follows;
   a. Firstly, to accept the proposal to award the Degree
   b. Secondly to thank the University as an acknowledgement and receipt of the regalia and testimonials. This is made to familiarize the recipient of the honor and protocols to be followed by the recipient in future.

N. Mish—

ALLIANCE UNIVERSITY * Bengaluru *

# ALLIANCE UNIVERSITY

*Private University established in Karnataka State by Act No.34 of year 2010*
*Recognized by the University Grants Commission (UGC), New Delhi*

**Honorary Doctorate recipients and their guests:**

1. The Vice-Chancellor's Office will provide the Graduation Office with contact details for the Honorary Doctorate recipients and any other pertinent information.
2. The Graduation Office will correspond with the recipient regarding requirements for academic regalia
3. No later than one week prior to the relevant ceremony, the Graduation Office will request a copy of the recipient's speech and provide it to the offices of the Vice-Chancellor

N. Mish

ALLIANCE UNIVERSITY Bengaluru